30	ಬೆಂಗಳೂರು ಮಾಗಡಿ ರಸ್ತೆಯಲ್ಲಿರುವ ಸುಮನ ಹಳ್ಳಿಯಲ್ಲಿ ಪ್ರಥಮ ದರ್ಜೆ ಕಾಲೇಜು ನಿರ್ಮಾಣದ (ಕೈಬಿಡಲಾಗಿದೆ)
31	ಬೆಂಗಳೂರು ಜಯನಗರದಲ್ಲಿರುವ 9ನೇ ಬ್ಲಾಕ್ ನಲ್ಲಿ ಸಿ ದರ್ಜೆ ನೌಕರರ ಸರ್ಕಾರಿ ವಸತಿ ಗೃಹ ನಿರ್ಮಾಣ (ಕೈಬಿಡಲಾಗಿದೆ)
32	ಬೆಂಗಳೂರು ಬನಶಂಕರಿಯಲ್ಲಿ ಹಾಲಿ ಇರುವ ನಗರ ಜಿಲ್ಲಾ ತರಬೇತಿ ಸಂಸ್ಥೆಯ ಕಟ್ಟಡದ ಮೇಲೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿ (ಎರಡನೇ ಮಹಡಿ)

386 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ) : ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ಮಂಡ್ಯ ಮೈಷುಗರ್ ಕಂಪನಿಗೆ ಗುತ್ತಿಗೆ ನೀಡಲಾಗಿದೆಯೇ; ಹಾಗಿದ್ದಲ್ಲಿ ಒಪ್ಪಂದದ ವಿವರಗಳನ್ನು ಒದಗಿಸುವುದು;

ಆ) ಪಾಂಡವಪುರ ಸಕ್ಕರೆ ಕಾರ್ಖಾನೆ ಹಾಗೂ ಮಂಡ್ಯ ಮೈಷುಗರ್ ಕಂಪನಿಯ ನಡುವೆ ಒಪ್ಪಂದ ಏರ್ಪಟ್ಟ ಮೇಲೆ ಒದಗಿಸಲಾಗಿರುವ ಹಣದ ಮೊತ್ತವೆಷ್ಟು; (ವಿವರಗಳನ್ನು ಒದಗಿಸುವುದು)

ಇ) ಪಾಂಡವಪುರ ಸಕ್ಕರೆ ಕಾರ್ಖಾನೆ ಹಾಗೂ ಮಂಡ್ಯ ಮೈಷುಗರ್ ಕಂಪನಿಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನ ಹಾಗೂ ಅದಕ್ಕೆ ವ್ಯಯಿಸುವ ಬೆಚ್ಚದ ವಿವರಗಳನ್ನು ನೀಡುವುದು;

ಈ) ಪಾಂಡವಪುರ ಸಕ್ಕರೆ ಕಾರ್ಖಾನೆ ಹಾಗೂ ಮಂಡ್ಯ ಮೈಷುಗರ್ ಕಂಪನಿಯ 2008–09ನೇ ಸಾಲಿನಿಂದ ಈವರೆಗಿನ ಆಡಿಟ್ ರಿಪೋರ್ಟ್‌ನ ಅಂಕಿ ಅಂಶಗಳ ಮಾಹಿತಿಯನ್ನು ಒದಗಿಸುವುದು;

ಉ) 2008ನೇ ಸಾಲಿನಿಂದ ಈವರೆವಿಗೂ ಪಾಂಡವಪುರ ಸಕ್ಕರೆ ಕಾರ್ಖಾನೆ ಹಾಗೂ ಮಂಡ್ಯ ಮೈಷುಗರ್ ಕಂಪನಿಗಳ ಲಾಭ ನಷ್ಟದ ವರ್ಷವಾರು ವಿವರಗಳನ್ನು ನೀಡುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :

ಅ) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಯ ನಿರ್ವಹಣೆಯನ್ನು (ಆಪರೇಷನ್ ಅಂಡ್ ಮ್ಯಾನೇಜ್‌ಮೆಂಟ್) ದಿ ಮೈಸೂರು ಶುಗರ್ ಕಂಪನಿ ಲಿ., ಮಂಡ್ಯ ಇದಕ್ಕೆ ಸರ್ಕಾರದ ಆದೇಶ ಸಂಖ್ಯೆ: ವಾಕೈ/87/ಸಸಕಾ/2008 ದಿನಾಂಕ: 31-05-2010 ರಂತೆ 2010-11ನೇ ಸಾಲಿನಿಂದ ಮೂರು ವರ್ಷದ ಅವಧಿಗೆ ವಹಿಸಿಕೊಡಲಾಗಿದೆ. ಸರ್ಕಾರ, ಮೈಸೂರು ಸಕ್ಕರೆ ಕಂಪನಿ ಲಿ., ಮತ್ತು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ನಡುವೆ ತ್ರಿಪಕ್ಷೀಯ ಒಪ್ಪಂದವನ್ನು ನೆರವೇರಿಸಲು ಬಾಕಿ ಇದೆ.

ಆ) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ದಿ ಮೈಸೂರು ಶುಗರ್ ಕಂಪನಿ ಇದಕ್ಕೆ 2010-11ನೇ ಸಾಲಿನಿಂದ ವಹಿಸಿಕೊಟ್ಟ ನಂತರ ಈ ಎರಡು ಕಾರ್ಖಾನೆಗಳಿಗೆ ಒದಗಿಸಲಾಗಿರುವ ಹಣದ ವಿವರ ಈ ಕೆಳಕಂಡಂತಿದೆ:

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಖಾನೆಯ ಹೆಸರು	ವರ್ಷ	ಮಂಜೂರಾದ ಮೊತ್ತ
1	ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,	2010-11	2500.00
		2011-12	1000.00
	ಒಟ್ಟು		**3500.00**
2	ಮೈಸೂರು ಶುಗರ್ ಕಂಪನಿ	2010-11	3956.77
		2011-12	5158.87
		2012-13	1500.00
	ಒಟ್ಟು		**10615.64**

ಇ)

1) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ದಿ ಮೈಸೂರು ಶುಗರ್ ಕಂಪನಿ ಇದಕ್ಕೆ 2010-11ನೇ ಸಾಲಿನಿಂದ ವಹಿಸಿ ಕೊಟ್ಟ ನಂತರ ಈ ಎರಡು ಕಾರ್ಖಾನೆಗಳಿಗೆ ಒದಗಿಸಲಾಗಿರುವ ಹಣದ ವಿವರವನ್ನು ಮೇಲೆ (ಆ) ರಲ್ಲಿ ನೀಡಲಾಗಿದೆ.

2) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಸರ್ಕಾರದಿಂದ ಮೇಲೆ ತಿಳಿಸಿದಂತೆ ರೂ.35.00 ಕೋಟಿಗಳನ್ನು ದುಡಿಯುವ ಬಂಡವಾಳ ವನ್ನಾಗಿ ನೀಡಿದ್ದು, ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

3) ಮೈಸೂರು ಸಕ್ಕರೆ ಕಂಪನಿ 2010–11ನೇ ಸಾಲಿನಿಂದ 2012–13 ನೇ ಸಾಲಿನವರೆಗೆ ಬಿಡುಗಡೆ ಮಾಡಿರುವ ಹಣವನ್ನು ಈ ಕೆಳಕಂಡಂತೆ ಉಪಯೋಗಿಸಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವಿವರ	ವೆಚ್ಚ ಮಾಡಲಾದ ಮೊಬಲಗು
1	ಕಬ್ಬು ಬಿಲ್ ಪಾವತಿ	1817.72
2	ಸಾಮಾಗ್ರಿ ಸರಬರಾಜು	182.28
3	ಮಿಲ್ ಆಧುನೀಕರಣ	4389.02
4	ಹುಡ್ಕೋ ಸಾಲ ಪಾವತಿ	3115.64
	ಒಟ್ಟು	**9504.66**

2012–13ನೇ ಸಾಲಿನಲ್ಲಿ ರೂ. 3000 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಸರ್ಕಾರದಿಂದ ರೂ.1500 ಲಕ್ಷಗಳು ಬಿಡುಗಡೆಯಾ ಗಿರುತ್ತದೆ. ಈ ಪೈಕಿ ರೂ. 389.02 ಲಕ್ಷಗಳನ್ನು ಮಿಲ್ಲಿನ ಆಧುನೀಕರಣಕ್ಕೆ ವ್ಯಯಿಸಲಾಗಿದ್ದು, ಉಳಿಕೆ ಹಣ ರೂ. 1110.98 ಲಕ್ಷಗಳನ್ನು ಬ್ಯಾಂಕಿನ ಖಾತೆಯಲ್ಲಿ ಇರಿಸಲಾಗಿದೆ.

ಈ)

1) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ 2008–09ನೇ ಸಾಲಿನಿಂದ 2011–12ನೇ ಸಾಲಿನವರೆಗಿನ ಆಡಿಟ್ ಕಾರ್ಯ ಪ್ರಗತಿ ಯಲ್ಲಿರುತ್ತದೆ.

2) ಮೈಸೂರು ಸಕ್ಕರೆ ಕಂಪನಿಯ 2008–09ನೇ ಸಾಲಿನಿಂದ 2010–11ನೇ ಸಾಲಿನವರೆಗೆ ಆಡಿಟ್ ಕಾರ್ಯ ಪೂರ್ಣವಾಗಿದೆ. ಮಾಡಿಟ್ಟ ವರದಿಯಂತೆ ಕಾರ್ಖಾನೆಯ ಕಾರ್ಯನಿರ್ವಹಣೆಯ ಅಂಕಿ–ಅಂಶಗಳ ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ವರ್ಷ	ಕಬ್ಬು ನುರಿಸಿರುವುದು	ಸಕ್ಕರೆ ಉತ್ಪಾದನೆ	ಸರಾಸರಿ ಇಳುವರಿ	ಆಲ್ಕೋಹಾಲ್ ಉತ್ಪಾದನೆ	ವ್ಯಾಪಾರ ಮೊತ್ತ
1	2008–09	159930	88405	5.52	32.10	5777.69
2	2009–10	122563	90675	7.40	6.70	3634.09
3	2010–11	497618	416150	8.36	49.00	10078.60

ಊ)

1) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ 2008–09ನೇ ಸಾಲಿನಿಂದ 2010–11ನೇ ಸಾಲಿನವರೆಗೆ ತಾತ್ಕಾಲಿಕ ನಷ್ಟದ ವಿವರಗಳು ಈ ಕೆಳಕಂಡಂತಿದೆ (ಈ ಕಾರ್ಖಾನೆಯ 2008–09 ರಿಂದ 2010–11ನೇ ಸಾಲಿನ ಶಾಸನ ಬದ್ಧ ಲೆಕ್ಕ ಪರಿಶೋಧನೆ ಪ್ರಗತಿಯಲ್ಲಿದೆ);

(ರೂ.ಲಕ್ಷಗಳಲ್ಲಿ)

ಕಾರ್ಖಾನೆಯ ಹೆಸರು	ವರ್ಷ	ಅನುಭವಿಸಿರುವ ನಷ್ಟ
ಪಾಂಡವಪುರ ಸಸಕಾನಿ	2008–09	548.12
	2009–10	823.52
	2010–11	1248.94

2) ಮೈಸೂರು ಸಕ್ಕರೆ ಕಂಪನಿ 2008–09ನೇ ಸಾಲಿನಿಂದ 2010–11ನೇ ಸಾಲಿನವರೆಗೆ ನಷ್ಟದ ವಿವರಗಳು ಈ ಕೆಳಕಂಡಂತಿದೆ. ಈ ಕಾರ್ಖಾನೆಯ 2011–12ನೇ ಸಾಲಿನ ಶಾಸನ ಬದ್ಧ ಲೆಕ್ಕ ಪರಿಶೋಧನೆ ಪ್ರಗತಿಯಲ್ಲಿದೆ.

(ರೂ.ಲಕ್ಷಗಳಲ್ಲಿ)

ಕಾರ್ಖಾನೆಯ ಹೆಸರು	ವರ್ಷ	ಅನುಭವಿಸಿರುವ ನಷ್ಟ
ಮೈಸೂರು ಸಕ್ಕರೆ ಕಂಪನಿ	2008–09	1722.43
	2009–10	4803.18
	2010–11	3052.60